<u>ದಿಃ 18.12.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರಿದ ಮುಖ್ಯವಿಚಾರಣೆಃ ಶ್ರೀ ಎನ್.ವಿ.ಸಿ., ವಾದಿಗಳ ಪರ ವಕೀಲರಿಂದಃ</u>

2. ಬಿಡಿಎ ದವರು ದಿಃ 12.11.1986 ರಂದು ಡಿ.ಕಾಂತಮ್ಮ ಎನ್ನುವವರಿಗೆ ದಾವಾ ಸ್ವತ್ತಿನ ಬಗ್ಗೆ ಬರೆದುಕೊಟ್ಟಿರುವ ನೋಂದಾಯಿತ ಕ್ರಯಪತ್ರದ ದೃಢೀಕೃತ ನಕಲನ್ನು **ನಿ.ಪಿ-1** ಎಂದು ಹಾಗು ಅದರ ಬೆರಳಚ್ಚು ಮಾಡಿದ ಜೆರಾಕ್ಸ್ ಪ್ರತಿಯನ್ನು **ನಿ.ಪಿ-1(ಎ)** ಎಂದು ಗುರುತಿಸಲಾಯಿತು. ದಿಃ 26.2.2010 ರಂದು ಡಿ.ಕಾಂತಮ್ಮ ಮತ್ತು ಎಂ.ಸಿ.ಮಂಜುನಾಥರವರು ಎಂ.ಸಿ.ಸುನೀಲ್ ಕುಮಾರ್ ರವರಿಗೆ ದಾವಾ ಆಸ್ತಿಯ ಬಗ್ಗೆ ಬರೆದುಕೊಟ್ಟಿರುವ ನೋಂದಾಯಿತ ಬಿಡುಗಡೆ ಪತ್ರವನ್ನು **ನಿ.ಪಿ-2** ಎಂದು ಗುರುತಿಸಲಾಯಿತು. ದಿಃ 14.4.2012 ರಂದು ಎಂ.ಸಿ.ಮಂಜುನಾಥ್ ಮೃತಪಟ್ಟಿದ್ದು, ಅವರ ಮರಣ ಪ್ರಮಾಣಪತ್ರವನ್ನು **ನಿ.ಪಿ-3** ಎಂದು ಗುರುತಿಸಲಾಯಿತು. ದಿಃ 5.3.2015 ರಂದು ಡಿ.ಕಾಂತಮ್ಮನವರು ಮೃತಪಟ್ಟಿದ್ದು, ಅವರ ಮರಣ ಪ್ರಮಾಣಪತ್ರವನ್ನು **ನಿ.ಪಿ-4** ಎಂದು ಗುರುತಿಸಲಾಯಿತು. ದಿಃ 29.08.2012 ರಂದು ಡಿ.ಕಾಂತಮ್ಮನವರು ಬರೆದುಕೊಟ್ಟಿರುವ ನೋಂದಾಯಿತ ವಿಲ್ ಪತ್ರವನ್ನು **ನಿ.ಪಿ-5** ಎಂದು ಗುರುತಿಸಲಾಯಿತು.

3. ಡಿ.ಕಾಂತಮ್ಮ ಮತ್ತು ಎಂ.ಸಿ.ಮಂಜುನಾಥ್ ರವರು ಹೂಡಿದ್ದ ದಾವೆ ಓ.ಎಸ್. 7047/2014 ರ ವಾದಪತ್ರದ ದೃಢೀಕೃತ ನಕಲನ್ನು **ನಿ.ಪಿ-6** ಎಂದು, ಅದರಲ್ಲಿ 1 ನೇ ಪ್ರತಿವಾದಿ ಹಾಕಿರುವ ಪ್ರತಿವಾದ ಪತ್ರದ ದೃಢೀಕೃತ ನಕಲನ್ನು **ನಿ.ಪಿ-7** ಎಂದು, 2 ನೇ ಪ್ರತಿವಾದಿ ಸಲ್ಲಿಸಿರುವ ಪ್ರತಿವಾದ ಪತ್ರದ ದೃಢೀಕೃತ ನಕಲನ್ನು **ನಿ.ಪಿ-8** ಎಂದು, ಅದೇ ದಾವೆಯಲ್ಲಿ ಡಿ.ಕಾಂತಮ್ಮನವರು PW-1 ಎಂದು ನೀಡಿರುವ ಸಾಕ್ಷ್ಯದ ದೃಢೀಕೃತ ನಕಲನ್ನು **ನಿ.ಪಿ-9** ಎಂದು, 1 ನೇ ಪ್ರತಿವಾದಿ ಎಂ.ಸಿ.ಸುನೀಲ್ ಕುಮಾರ್ ಆ ದಾವೆಯಲ್ಲಿ ನುಡಿದಿರುವ DW-1 ಎಂದು ನುಡಿದಿರುವ ಸಾಕ್ಷ್ಯದ ದೃಢೀಕೃತ ನಕಲನ್ನು **ನಿ.ಪಿ-10** ಎಂದು, ಅದೇ ದಾವೆಯ ಸಂಪೂರ್ಣ order sheet ನ ದೃಢೀಕೃತ ನಕಲನ್ನು **ನಿ.ಪಿ-11** ಎಂದು ಗುರುತಿಸಲಾಯಿತು.

4. ಸುನೀಲ್ ಕುಮಾರ್ ಎಂ.ಸಿ. ಹೂಡಿದ್ದ ದಾವೆ ಸಂಖ್ಯೆ 4789/2012 ಕೇಸಿನ ಸಂಪೂರ್ಣ order sheet ನ ದೃಢೀಕೃತ ನಕಲನ್ನು **ನಿ.ಪಿ-12** ಎಂದು, ಅದೇ ಕೇಸ್ ನಲ್ಲಿ ಡಿ.ಕಾಂತಮ್ಮನವರು O.1 Rule 10(2) C.P.C ಪ್ರಕಾರ ಸಲ್ಲಿಸಿದ್ದ ಅರ್ಜಿಯ ದೃಢೀಕೃತ ನಕಲನ್ನು **ನಿ.ಪಿ-13** ಎಂದು ಗುರುತಿಸಲಾಯಿತು.

5. ಅಸಲು ದಾವೆ ಸಂಖ್ಯೆ 5143/2011 ರ ಸಂಪೂರ್ಣ order sheet ನ ದೃಢೀಕೃತ ನಕಲನ್ನು **ನಿ.ಪಿ-14** ಎಂದು, ಅದೇ ಕೇಸಿನ ವಾದ ಪತ್ರದ ದೃಢೀಕೃತ ನಕಲನ್ನು **ನಿ.ಪಿ-15** ಎಂದು, ಅದೇ ಕೇಸಿನಲ್ಲಿ ಡಿ.ಕಾಂತಮ್ಮನವರು ಸಲ್ಲಿಸಿದ್ದ ಪ್ರತಿವಾದ ಪತ್ರದ ದೃಢೀಕೃತ ನಕಲನ್ನು **ನಿ.ಪಿ-16** ಎಂದು, ಅದೇ ಕೇಸಿನಲ್ಲಿ 2 ನೇ ಪ್ರತಿವಾದಿ ಎಂ.ಸಿ.ಸುರೇಶ್ ರವರು ಸಲ್ಲಿಸಿದ್ದ ಪ್ರತಿವಾದ ಪತ್ರದ ದೃಢೀಕೃತ ನಕಲನ್ನು **ನಿ.ಪಿ-17** ಎಂದು, ಅದೇ ಕೇಸಿನಲ್ಲಿ 4 ನೇ ಪ್ರತಿವಾದಿ ಎಂ.ಸಿ.ಸುನೀಲ್ ಕುಮಾರ್ ಸಲ್ಲಿಸಿದ್ದ ಪ್ರತಿವಾದ ಪತ್ರದ ದೃಢೀಕೃತ ನಕಲನ್ನು **ನಿ.ಪಿ-18** ಎಂದು, ಅದೇ ಕೇಸಿನಲ್ಲಿ 2 ನೇ ಪ್ರತಿವಾದಿ ಸಲ್ಲಿಸಿದ್ದ ಹೆಚ್ಚುವರಿ ಪ್ರತಿವಾದ ಪತ್ರದ ದೃಢೀಕೃತ ನಕಲನ್ನು **ನಿ.ಪಿ-19** ಎಂದು, ಅದೇ ಕೇಸಿನಲ್ಲಿ 4 ನೇ ಪ್ರತಿವಾದಿ ಸಲ್ಲಿಸಿದ್ದ ಹೆಚ್ಚುವರಿ ಪ್ರತಿವಾದ ಪತ್ರದ ದೃಢೀಕೃತ ನಕಲನ್ನು **ನಿ.ಪಿ-20** ಎಂದು ಗುರುತಿಸಲಾಯಿತು.

6. ಬಿಡಿಎ ದವರು ದಿಃ 28.7.2023 ರಂದು ಎಂ.ಸಿ.ಸುರೇಶ್ ರವರಿಗೆ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಮಾಹಿತಿ ಹಕ್ಕಿನ ನಿಯಮದಡಿಯಲ್ಲಿ ನೀಡಲಾಗಿರುವ ಮಾಹಿತಿಯನ್ನು **ನಿ.ಪಿ-21** ಎಂದು, ನಿ.ಪಿ-21 ಕ್ಕೆ ಪೂರಕವಾಗಿ ಬಿಡಿಎ ದವರು ನೀಡಿರುವ ದಾವಾ ಸ್ವತ್ತಿನ ಸ್ವಾಧೀನ ಪತ್ರದ ಬಗ್ಗೆ ದಿಃ1.9.1967 ರಂದು ನೀಡಲಾಗಿರುವ Memo ದ ದೃಢೀಕೃತ ನಕಲನ್ನು **ನಿ.ಪಿ-22** ಎಂದು, ಸದರಿ ಸೈಟಿನ ಬಗ್ಗೆ ಬಿಡಿಎ ದಲ್ಲಿ ಕಚೇರಿಯ ನಡಾವಳಿಯ ದೃಢೀಕೃತ ನಕಲನ್ನು **ನಿ.ಪಿ-23** ಎಂದು, ದಿಃ 8.9.1967 ರಂದು ಸ್ವಾಧೀನ ನೀಡಿರುವ ಬಗ್ಗೆ ಬಿಡಿಎ ದವರು ನೀಡಲಾಗಿರುವ ಒಂದು memo ದ ದೃಢೀಕೃತ ನಕಲನ್ನು **ನಿ.ಪಿ-24** ಎಂದು, ಸ್ವತ್ತಿನ ಋಣಭಾರ ರಾಹಿತ್ಯ ಪತ್ರ Form No.15 ರ ದೃಢೀಕೃತ ನಕಲನ್ನು **ನಿ.ಪಿ-25** ಎಂದು, ಬೆಂಗಳೂರು ಉತ್ತರ ತಾಲ್ಲೂಕಿನ ತಹಸೀಲ್ದಾರ್ ರವರು ಲೇಟ್ ಚಾಮಣ್ಣನವರ ಕುಟುಂಬದ ಸದಸ್ಯರ ಬಗ್ಗೆ ನೀಡಿರುವ

Survivor-ship certificate ನ ದೃಢೀಕೃತ ನಕಲನ್ನು **ನಿ.ಪಿ-26** ಎಂದು, ದಿಃ30.11.1981 ರಂದು ಚಾಮಣ್ಣನವರ ಹೆಸರಿಗೆ ಸ್ವತ್ತಿನ ವರ್ಗಾವಣೆ ಆಗಿರುವ ಬಗ್ಗೆ ಬಿಡಿಎ ದವರು ನೀಡಿರುವ ಪತ್ರದ ದೃಢೀಕೃತ ನಕಲನ್ನು **ನಿ.ಪಿ-27** ಎಂದು, ಬಿಡಿಎ ದವರಿಗೆ ಶ್ರೀಮತಿ ಡಿ.ಕಾಂತಮ್ಮ ಮತ್ತು ಅವರ ಮಕ್ಕಳು ನೀಡಿರುವ ಜಂಟಿ ಅಫಿಡವಿಟ್ ನ ದೃಢೀಕೃತ ನಕಲನ್ನು **ನಿ.ಪಿ-28** ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಪ್ರತಿವಾದಿಯರ ಪರ ವಕೀಲರು ಸಮಯಾವಕಾಶ ಕೋರಿರುತ್ತಾರೆ. ಆದ್ದರಿಂದ ಪಾಟಿಸವಾಲನ್ನು ಮುಂದೂಡಲಾಗಿದೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಕೇ. ಹೇ. ಸರಿ ಇದೆ

(ಎಂ. ಚಂದ್ರಶೇಖರ್ ರೆಡ್ಡಿ )
ಪ್ರಧಾನ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,
(ಸಿಸಿಹೆಚ್ - 01) ಬೆಂಗಳೂರು.